# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1105 |
| ಸದಸ್ಯರ ಹೆಸರು | : | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 23.02.2024 |
| ಉತ್ತರಿಸುವ ಸಚಿವರು | : | ಪರಿಶಿಷ್ಟ ಪಂಗಡಗಳ ಕಲ್ಯಾಣ, ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ ಜಿಲ್ಲೆಯಲ್ಲಿನ ಐದು ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಅಲೆಮಾರಿ/ಅರೆಅಲೆಮಾರಿ ಕುಟುಂಬಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು) | ಬೀದರ ಜಿಲ್ಲೆಯಲ್ಲಿನ ಐದು ತಾಲ್ಲೂಕಿನಲ್ಲಿ ವಾಸಿಸುತ್ತಿರುವ ಅಲೆಮಾರಿ/ಅರೆಅಲೆಮಾರಿ ಕುಟುಂಬಗಳ ಸಂಖ್ಯೆ: **3701**.<br>ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ತಾಲ್ಲೂಕು | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಒಟ್ಟು |
|---|---|---|---|---|
| 1 | ಔರಾದ (ಬಿ) | 83 | 79 | 162 |
| 2 | ಬಸವ ಕಲ್ಯಾಣ | 68 | 123 | 191 |
| 3 | ಭಾಲ್ಕಿ | 214 | 86 | 300 |
| 4 | ಬೀದರ | 98 | 0 | 98 |
| 5 | ಹುಮನಾಬಾದ | 2900 | 50 | 2950 |
| | **ಒಟ್ಟು** | **3363** | **338** | **3701** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಈ ಕುಟುಂಬಗಳ ಕಲ್ಯಾಣಕ್ಕಾಗಿ ಸರ್ಕಾರ ಯಾವ ಕ್ರಮ ಕೈಗೊಳ್ಳಲಾಗಿದೆ; (ವಿವರ ನೀಡುವುದು) | ಈ ಕುಟುಂಬಗಳ ಕಲ್ಯಾಣಕ್ಕಾಗಿ ಅಲೆಮಾರಿ ಅಭಿವೃದ್ಧಿ ನಿಗಮದಿಂದ 05 ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.<br>1) ಸ್ವಯಂ-ಉದ್ಯೋಗ (ನೇರಸಾಲ) ಯೋಜನೆ<br>2) ಉದ್ಯಮ ಶೀಲತೆ ಯೋಜನೆ (ಘ, ವೆ. 2 ಲಕ್ಷ)<br>3) ಉದ್ಯಮ ಶೀಲತೆ ಯೋಜನೆ ಸ್ವಾವಲಂಬಿ ಸಾರಥಿ ಯೋಜನೆ (ಘ,ವೆ. 4 ಲಕ್ಷ)<br>4) ಭೂ ಒಡೆತನ ಯೋಜನೆ<br>5) ಗಂಗಾ ಕಲ್ಯಾಣ ಯೋಜನೆ<br>6) ಮೈಕ್ರೋಕ್ರೆಡಿಟ್ ಯೋಜನೆ<br>ಈ ಮೇಲಿನ ಯೋಜನೆಗಳನ್ನು ಜಿಲ್ಲಾವಾರು ಸಮುದಾಯದವರ ಜನಸಂಖ್ಯೆ ಆಧರಿಸಿ ಭೌತಿಕ ಗುರಿಗಳನ್ನು ನಿಗಧಿಪಡಿಸಿ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. |

| | | |
|---|---|---|
| ಇ) | ಅಲೆಮಾರಿ ಕುಟುಂಬಗಳ ಮಕ್ಕಳು ಶಾಲೆಗೆ ಹೋಗದೆ ಮತ್ತು ಅವರುಗಳಿಗೆ ವಸತಿ ಸೌಕರ್ಯಗಳಲ್ಲದೆ ತುಂಬಾ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಈ) | ಇವರುಗಳ ಏಳಿಗೆಗಾಗಿ ಔರಾದ್ ತಾಲ್ಲೂಕಿನಲ್ಲಿ ಎರಡು ಎಕರೆ ಭೂಮಿಯನ್ನು 2020-21 ರಲ್ಲಿ ಸರ್ಕಾರವು ಮಂಜೂರು ಮಾಡಿದ್ದು, ಇಲ್ಲಿಯವರೆಗೆ ಇವರುಗಳಿಗೆ ಹಂಚಿಕೆ ಮಾಡದಿರಲು ಕಾರಣವೇನು; ಇವರಿಗೆ ಯಾವ ಕಾಲಮಿತಿಯಲ್ಲಿ ಹಂಚಲಾಗುವುದು; | ಅಲೆಮಾರಿ/ಅರೆಅಲೆಮಾರಿ ಜನಾಂಗದವರಿಗೆ ಸ್ವಂತ ಮನೆ ನಿರ್ಮಾಣ ಮಾಡಿಕೊಳ್ಳಲು ವಸತಿ ಇಲಾಖೆಯಿಂದ 2023-24ನೇ ಸಾಲಿಗೆ 5000 ಮನೆಗಳ ಗುರಿಗಳನ್ನು ನಿಗಧಿಪಡಿಸಿ ನೀಡಲಾಗಿದ್ದು, ಅಲೆಮಾರಿ ಸಮುದಾಯದವರಿಗೆ ಸ್ವಂತ ನಿವೇಶನಕ್ಕೆ ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ ಬೀದರ ಜಿಲ್ಲೆ ಇವರಿಗೆ ತಿಳಿಸಲಾಗಿದೆ ಹಾಗೂ ಸೂಕ್ತ ಸ್ಥಳಾವಕಾಶಕ್ಕಾಗಿ ಬೀದರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿದ್ದು, ಮುಂದಿನ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| ಉ) | ಇನ್ನುಳಿದ ತಾಲ್ಲೂಕುಗಳಲ್ಲಿ ಈ ಜನಾಂಗಕ್ಕೆ ಯಾವಾಗ ನಿವೇಶನ ಹಂಚಲಾಗುವುದು; ಅದಕ್ಕೇನಾದರು ಕಾಲಮಿತಿ ನಿರ್ಧಾರ ಮಾಡಲಾಗಿದೆಯೇ; | ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮದಿಂದ ರಾಜ್ಯದ 31 ಜಿಲ್ಲೆಗಳಿಗೆ ವಸತಿ ಯೋಜನೆಗೆ ಸಂಬಂಧಿಸಿದಂತೆ ಈಗಾಗಲೇ ವಸತಿ ಯೋಜನೆ ಜಾರಿಯಲ್ಲಿದ್ದು, ನಿವೇಶನ ಹೊಂದಿರುವ ಫಲಾನುಭವಿಗಳಿಗೆ ರಾಜೀವಗಾಂಧಿ ವಸತಿ ನಿಗಮದಿಂದ ಮನೆಯನ್ನು ನಿರ್ಮಿಸಿಕೊಡುವ ಕೆಲಸ ಪ್ರಗತಿಯಲ್ಲಿರುತ್ತದೆ. |

STW/SECA/STC/13/2024

**(ಬಿ ನಾಗೇಂದ್ರ)**
ಪರಿಶಿಷ್ಟ ಪಂಗಡಗಳ ಕಲ್ಯಾಣ,
ಯುವ ಸಬಲೀಕರಣ ಹಾಗೂ ಕ್ರೀಡಾ ಸಚಿವರು